## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ.ಸಿ. 1021/2019** **CW15 – PW 11**

ದಿಃ 14.07.2026 ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಡಾ. ವಿರೇಂದ್ರ ಕುಮಾರ ಕೆ ಬಿ |
| ತಂದೆಯ ಹೆಸರುಃ | ಕೆ ಎನ್ ಭೀಮಯ್ಯ |
| ವಯಸ್ಸುಃ | 56 ವರ್ಷ |
| ಉದ್ಯೋಗಃ | ಡಾಕ್ಟರ್ |
| ವಾಸಸ್ಥಳಃ | ತ್ಯಾಮಗೊಂಡ್ಲು, ಬೆಂಗಳೂರು ಗ್ರಾಮಂತರ. |

**ಮುಖ್ಯ ವಿಚಾರಣೆಃ ಮಾನ್ಯ ಸ ಸಅ ರವರಿಂದಃ**

ನಾನು 2017 ರಲ್ಲಿ 15 ದಿನಗಳರವರೆಗೆ ಕಮ್ಯುನಿಟಿ ಹೆಲ್ತಕೇರ್ ಕುಶಾಲನಗರದಲ್ಲಿ ಓ ಓ ಡಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11.04.2017 ರಂದು ಮಧ್ಯಾಹ್ನ 1.20 ಗಂಟೆಗೆ ಚಾಸಾ 1 ರಿಂದ 4 ರವರು ಹಲ್ಲೆಗೊಳಗಾಗಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿರುತ್ತಾರೆ.

ಚಾಸಾ 1 ರವರನ್ನು ಪರೀಕ್ಷಿಸಿದಾಗ, ಅವರ ಬಲಗಾಲಿ ಹೊರಭಾಗದಲ್ಲಿ ಭರೆಯರೀತಿ ಕಂಡು ಬಂದಿರುತ್ತದೆ. ಸದರಿ ಗಾಯ ಸಾದಸ್ವರೂಪದ ಗಾಯವಾಗಿರುತ್ತದೆ.

ಚಾಸಾ 2 ರವರನ್ನು ಪರೀಕ್ಷಿಸಿದಾಗ, ಅವರ ಎಡಗೈ ಮುಂಗೈ ತೆರಚಿದ ಗಾಯ ಕಂಡು ಬಂದಿರುತ್ತದೆ. ಸದರಿ ಗಾಯ ಸಾದಸ್ವರೂಪದ ಗಾಯವಾಗಿರುತ್ತದೆ.

ಚಾಸಾ 3 ರವರನ್ನು ಪರೀಕ್ಷಿಸಿದಾಗ, ಅವರ ಬಲಗೈ ಮಧ್ಯ ಬೆರಳಿನ ಮೇಲಭಾಗದಲ್ಲಿ ಚರ್ಮ ಹರಿದಿರುವುದು ಕಂಡು ಬಂದಿರುತ್ತದೆ. ಸದರಿ ಗಾಯ ಸಾದಸ್ವರೂಪದ ಗಾಯವಾಗಿರುತ್ತದೆ.

ಚಾಸಾ 4 ರವರನ್ನು ಪರೀಕ್ಷಿಸಿದಾಗ , ಚಾಸಾ 4 ರವರ ಬಲಗಡೆ ಸೊಂಟದ ಭಾಗದಲ್ಲಿ ಊದಿರುವುದು ಕಂಡು ಬಂದಿರುತ್ತದೆ. ಸದರಿ ಗಾಯ ಸಾದಸ್ವರೂಪದ ಗಾಯವಾಗಿರುತ್ತದೆ.

ಚಾಸಾ 1 ರಿಂದ 4 ರವರನ್ನು ಪರೀಕ್ಷಿಸಿ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅವುಗಳನ್ನು ನಿಪಿ 6 ರಿಂದ 9 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿ ಯನ್ನು ನಿಪಿ 6(ಎ), 7(ಎ) , 8(ಎ), 9(ಎ) ಎಂದು ಗುರುತಿಸಲಾಯಿತು. ಕೈ ಯಿಂದ ಹೊಡೆದು, ಕಾಲಿನಿಂದ ಒದ್ದು, ದೊಣ್ಣೆ ಮತ್ತು ಕಲ್ಲಿನಿಂದ ಹೊಡೆದಾಗ ನಿಪಿ 6 ರಿಂದ 9 ರಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆಗಳು ಇವೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಿಪಿ 9 ರಲ್ಲಿ ನಮೂದಿಸಿರುವ ಗಾಯ ಸ್ಕೂಟರನಲ್ಲಿ ಹೋಗುವಾಗ ಸ್ಕಿಡ್ ಆಗಿ ಬಿದ್ದಾಗ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಎತ್ತರದ ಸ್ಥಳದ ತಗ್ಗಿನ ಪ್ರದೇಶಕ್ಕೆ ಹಿಮುಖವಾಗಿ ಬಿದ್ದಾಗ ನಿಪಿ 8 ರಲ್ಲಿ ನಮೂದಿಸಿರುವ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ. ನಿಪಿ 6 ರಲ್ಲಿ ನಮೂದಿಸಿರುವ ಗಾಯ ಓಡುವಾಗ ಆಯ ತಪ್ಪಿ ಬಲಭಾಗದಲ್ಲಿ ಬಿದ್ದಾಗ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಹಿಮುಖವಾಗಿ ಬಿದ್ದಾಗ ನಿಪಿ 7 ರಲ್ಲಿ ನಮೂದಿಸಿರುವ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ. ನಿಪಿ 6 ರಿಂದ 9 ರಲ್ಲಿ ಗಾಯದ ವಯಸ್ಸು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಗಾಯಾಳುಗಳೇ ಸ್ವತಃ ಆಸ್ಪತ್ರೆಗೆ ಬಂದಿರುತ್ತಾರೆ.

2 ಚಾಸಾ 1 ರಿಂದ 4 ರವರಿಗೆ ಚಿಕಿತ್ಸೆ ನೀಡಿದ್ದೆನೆಂದು ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.